## ಚೆಲುವ ಕನ್ನಡನಾಡು ಚಳವಳಿಗಳ ಬೀಡು

# ಕನ್ನಡ ಸಾಹಿತ್ಯ ಮತ್ತು ಸಾಮಾಜಿಕ ಚಳವಳಿ

■ **ನಟರಾಜ್ ಹುಳಿಯಾರ್**



ಒಂದು ಭಾಷೆ ಮತ್ತು ಅದನ್ನೊಳಗೊಂಡ ಸಮುದಾಯದ ಬೆಳವಣಿಗೆಯಲ್ಲಿ ಆ ಮಣ್ಣಿನಲ್ಲಿ ನಡೆದ ಸಾಮಾಜಿಕ ಚಳವಳಿಗಳು ಮುಖ್ಯ ಪಾತ್ರ ವಹಿಸುತ್ತವೆ. ಕನ್ನಡವನ್ನೇ ಗಮನಿಸಿದರೆ, ಕಳೆದೊಂದು ಶತಮಾನದಲ್ಲಿ ಕರ್ನಾಟಕದಲ್ಲಿ ಸಂಭವಿಸಿದ ಅನೇಕ ಚಳವಳಿಗಳು ಕನ್ನಡ ನಾಡು–ನುಡಿ ಹಾಗೂ ಸಮುದಾಯವನ್ನು ಪೊರೆದಿವೆ. ಗಾಂಧಿ, ಲೋಹಿಯಾ, ಜಯಪ್ರಕಾಶ ನಾರಾಯಣ, ಅಂಬೇಡ್ಕರ್ ಸೇರಿದಂತೆ ಎಲ್ಲ ಸಿದ್ಧಾಂತಗಳ ಪ್ರಯೋಗಶಾಲೆಯಾಗಿ ಕರ್ನಾಟಕ ಗುರ್ತಿಸಿಕೊಂಡಿದೆ. ದೀನ ದಲಿತರು, ಹಿಂದುಳಿದ ವರ್ಗಗಳ ಅಭ್ಯುದಯವನ್ನು ಹಂಬಲಿಸಿದ ದಲಿತ–ಬಂಡಾಯ ಚಳವಳಿಗಳು, ಪ್ರಗತಿಶೀಲರ ಚಿಂತನೆ, ರೈತರ ಆಶೋತ್ತರಗಳಿಗೆ ಅಭಿವ್ಯಕ್ತಿಯಾದ ಕೃಷಿ ಚಳವಳಿಗಳು, ಹೊಸನೀರಿನ ಸೇರ್ಪಡೆಯ ಮೂಲಕ ಸಾಹಿತ್ಯದಲ್ಲಿ ಚಲನಶೀಲತೆಯನ್ನು ನಿರಂತರವಾಗಿ ಉಳಿಸಿದ ಸಾಹಿತ್ಯಿಕ ಚಳವಳಿಗಳು, ಭಾಷಾ ಚಳವಳಿಗಳು – ಇವೆಲ್ಲದರ ಮೊತ್ತ 'ಆಧುನಿಕ ಕರ್ನಾಟಕ'. ಕನ್ನಡ ಸಾಹಿತ್ಯ–ಸಂಸ್ಕೃತಿ ಮತ್ತು ಸಾಮಾಜಿಕ ಚಳವಳಿಗಳಿಗೆ ಸಂಬಂಧಿಸಿದ 'ಶತಮಾನದ ಮಹಾಪಯಣ'ದ ಈ ಅವಲೋಕನ 'ಕನ್ನಡದ ಚಳವಳಿ ಪರಂಪರೆ'ಯ ಬಗ್ಗೆ ಅರಿವು ಮತ್ತು ಹೆಮ್ಮೆಯನ್ನು ಮೂಡಿಸಬಲ್ಲದು ಹಾಗೂ ಈ ವರ್ತಮಾನದ ಕನ್ನಡ ಜಗತ್ತನ್ನು ಕಟ್ಟಿಕೊಳ್ಳಲು ಅಗತ್ಯವಾದ ತಾತ್ವಿಕನೋಟವನ್ನು ನೀಡಬಲ್ಲದು.